## ಟ್ವೀಟು ಖಾರ



ಮಂಜುನಾಥ
@ ManjuFeel

ನನ್ ಮಗಂದ್ ಹೆಂಗಾರ ಮಾಡಿ ನಮ್ಮ ಸಿದ್ದಣ್ಣನ್ನ ಪಾಕಿಸ್ತಾನದಲ್ಲಿ ಚುನಾವಣೆಗೆ ನಿಲ್ಲಿಸಿ ಸೋಲಿಸಿಬಿಟ್ಟರ್ರೇ,ಅಲ್ಲಿ ಜಲಪ್ರಳಯವಾಗಿ ಅದು ಮುಳುಗಿ ಹೋಗುತ್ತದೆ.



ಅಕ್ಷಯ್ ಅಕ್ಕಿ
@AkshayVandure1

ಈ ಯಡ್ಡಿ ಪರ ನಿನ್ನೆ ಪೋಸ್ಟ್ ಹಾಕ್ದೋರು ತಮ್ ತಮ್‌ದ್ ತಗೊಂಡ್ ತಾವೇ ಹೋಡ್ಕೊಳ್ಳಿ. ಕರ್ನಾಟಕ ಬಿಜೆಪಿ ಉದ್ದಾರ. ನಿಮ್ ಮಕಾ ಮುಚ್ಚಾ ಮೋದಿಜಿ ಪ್ರಧಾನಿ ಆಗೋಕೆ ಕೆಲ್ಸ ಮಾಡ್ರೋ ಅಂದ್ರೆ ಎನ್ರೋ ನಿಮ್ಮದೆಲ್ಲ ನವರಂಗಿ ಆಟಗಳು.



ಎನ್ ನಿಮ್ ಪ್ರಾಬ್ಲಮ್
@ arunbtgbd

ಕುಮಾರಸ್ವಾಮಿಗೆ ಹುಬ್ಬಳ್ಳಿ ಕಾರ್ಯಕ್ರಮಕ್ಕೆ ಆಹ್ವಾನ ಇಲ್ಲವಂತೆ ಅಂತ ಸುದ್ದಿ. ಮುಖಕ್ಕೆ ಮಂಗಳಾರತಿ ಮಾಡಲಿಕ್ಕೆ ಆಹ್ವಾನ ಕೊಟ್ಟು ಕರಿತಾರ ಬ್ರದರ್?



ಪೂರ್ವಿರಾಜು ಅರಸ್
@ purviraju1

ಯಡಿಯೂರಪ್ಪ ಅವರು ತಪ್ಪನ್ನು ಒಪ್ಪಿಕೊಂಡಿದಾರೆ. ಮೋದಿ ಪ್ರಧಾನಿ ಆದರೆ ದೇಶ ಬಿಟ್ಟು ಹೋಗುತ್ತೇನೆ ಅಂದೋರು ಯಾವಾಗ ಹೋಗುತ್ತಾರೆ?

ಕರ್ನಾಟಕ ಕಾಂಗ್ರೆಸ್
@ INCKarnataka

ಮೋದಿ 2014-15ರ ವಿತ್ತ ಸಚಿವಾಲಯದ ಸಾಲದ ಮಾಹಿತಿಯಂತೆ ₹54,229 ಇದ್ದ ತಲಾ ಸಾಲ 2017-18 ರಲ್ಲಿ ₹73,966 ಆಗಿದೆ. ವಿಕಾಸದ ಹೆಸರಿನಲ್ಲಿ ದೇಶವನ್ನು ಸಾಲದ ಸುಳಿಗೆ ಸಿಲುಕಿಸಿದ್ದೇ ನಿಮ್ಮ ಸಾಧನೆ.

## ಪ್ರಧಾನಿ ಒಬ್ಬ ಹಿಟ್ಲರ್

**ಬಾಗಲಕೋಟೆ:** ಪ್ರಧಾನಿ ನರೇಂದ್ರ ಮೋದಿ ಒಬ್ಬ ಹಿಟ್ಲರ್ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ, ನಮ್ಮ ರಾಜ್ಯದಲ್ಲಷ್ಟೆ ಅಲ್ಲ.. ಅವರು ಬೇರೆ ರಾಜ್ಯಕ್ಕೆ ಹೋದರೂ ಲೆಕ್ಕಕ್ಕಿಲ್ಲ ಎಂದು ಲೇವಡಿ ಮಾಡಿದರು. ಕುಮಾರಸ್ವಾಮಿ ಥರ್ಡ್ ಗ್ರೇಡ್ ಪಾಲಿಟಿಕ್ಸ್ ಎಂದು ಬಿಎಸ್‌ವೈ ಹೇಳಿಕೆಗೆ ಪ್ರತಿಕ್ರಿಯಿಸಿ, ಕುಮಾರಸ್ವಾಮಿ ಆಡಿಯೊ ಸಾಬೀತಾಗಲಿ ಎಂದು ಹೇಳಿದ್ದಾರೆ. ಆಡಿಯೊ ರೆಕಾರ್ಡ್ ತಪ್ಪಾಗಿದ್ದರೆ. ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ ಎಂದಿದ್ದಾರೆ. ನೀವೂ ಅರ್ಥ ಮಾಡಿಕೊಳ್ಳಿ. ಕುಮಾರಸ್ವಾಮಿ ಎಷ್ಟು ಕಾನ್ಫಿಡೆನ್ಸ್ ಆಗಿದ್ದಾರೆ ಅನ್ನೋದು. ಆಡಿಯೊವನ್ನು ಎಫ್‌ಎಸ್‌ಎಲ್ ವರದಿಗೆ ಕಳುಹಿಸಿದ್ದೇವೆಂದು ಗೃಹ ಸಚಿವರು ಹೇಳಿದ್ದಾರೆ. ಎರಡು ದಿನದೊಳಗೆ ಸತ್ಯಾಸತ್ಯತೆ ಹೊರಬರಲಿದೆ ಎಂದರು.



## ಯಡಿಯೂರಪ್ಪ ರಾಜೀನಾಮೆ ನೀಡಲಿ

**ಬಾಗಲಕೋಟೆ:** ಆಡಿಯೊ ವಿಚಾರದಲ್ಲಿ ತಪ್ಪು ಒಪ್ಪಿಕೊಂಡಿರುವ ಮಾಜಿ ಸಿಎಂ ಯಡಿಯೂರಪ್ಪ ರಾಜೀನಾಮೆ ನೀಡಿ ಮನೆಗೆ ಹೋಗಲಿ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಯಡಿಯೂರಪ್ಪ ಹೇಳಿದ್ದೇನು..? ನನ್ನದೇ ವಾಯ್ಸ್ ಆಗಿದ್ದರೆ ರಾಜೀನಾಮೆ ಕೊಡ್ತೀನಿ ಎಂದಿದ್ದರು. ಈಗ ರಾಜಿನಾಮೆ ಕೊಡಲಿ ಪಾಪ, 'ಲೆಟ್ ಹಿಮ್ ಸಿಕ್ ಟು ಇಸ್ ವರ್ಡ್ಸ್' ಯಡಿಯೂರಪ್ಪ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು ಎಂದು ಬಿಎಸ್‌ವೈ ರಾಜೀನಾಮೆಗೆ ಒತ್ತಾಯಿಸಿದರು. ನರೇಂದ್ರ ಮೋದಿಗೆ ಯಾವುದೇ ಪ್ರೊಟೋಕಾಲ್ ಗೊತ್ತಿಲ್ಲ ಎಂದರು.



## ನಾನು ಹಿಟ್ಲರ್ ಅಲ್ಲ

**ರಾಯಚೂರು:** ನಾನೇನು ಹಿಟ್ಲರ್ ಅಲ್ಲ, ಕಾನೂನಿನ ಚೌಕಟ್ಟಿನಲ್ಲೆ ಕ್ರಮ ಕೈಗೊಳ್ಳುತ್ತೇನೆ ಎಂದು ವಿಧಾನಸಭೆ ಅಧ್ಯಕ್ಷ ಕೆ.ಆರ್. ರಮೇಶ ಕುಮಾರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಯಡಿಯೂರಪ್ಪರವರ ಆಪರೇಷನ ಕಮಲದ ಆಡಿಯೊ ಕುರಿತು ಸೋಮವಾರ ನಡೆಯುವ ಸದನದಲ್ಲಿ ಈ ಬಗ್ಗೆ ಚರ್ಚೆ ಮಾಡುತ್ತೇವೆ. ಪ್ರಸಕ್ತ ರಾಜಕೀಯ ಬೆಳವಣಿಗೆ ನೋವು ತಂದಿದೆ ಎಂದರು. ಯಾರು ಮಾರಾಟವಾಗುತ್ತಾರೋ ಯಾರು ಯಾರಿಗೆ ಹಣ ನೀಡಿದ್ದಾರೆ ನನಗೆ ಮಾಹಿತಿಯಿಲ್ಲ.ಸಭಾಧ್ಯಕ್ಷ ಸ್ಥಾನ ಅತ್ಯಂತ ಘನತೆಯುಳ್ಳ ಜವಾಬ್ದಾರಿಯುತ ಸ್ಥಾನ ಅದನ್ನು ಅಪಮಾನಗೊಳಿಸಲು ಬಿಡಲ್ಲ ಎಂದರು.



### ಆಡಿಯೊ ವಿಚಾರದಲ್ಲಿ ಯಡಿಯೂರಪ್ಪ ತಪ್ಪೊಪ್ಪಿಕೊಂಡ ವಿಚಾರಕ್ಕೆ ಕುಮಾರಸ್ವಾಮಿ ಲೇವಡಿ

# ಕುದುರೆ ವ್ಯಾಪಾರ ಜಾಯಮಾನ ನನ್ನದಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆಡಿಯೊ ವಿಚಾರದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಯಡಿಯೂರಪ್ಪ ತಪ್ಪೊಪ್ಪಿಕೊಂಡಿದ್ದಾರೆ. ಧರ್ಮಸ್ಥಳದ ಮಂಜುನಾಥಸ್ವಾಮಿ ಅವರಿಗೆ ಬುದ್ಧಿ ಕೊಟ್ಟಿರಬಹುದು ಎಂದು ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಲೇವಡಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಫೆ.8 ರಂದು ಬಜೆಟ್ ಮಂಡನೆಗೆ ಮುನ್ನ ಗೃಹ ಕಚೇರಿ ಕೃಷ್ಣದಲ್ಲಿ ಆಪರೇಷನ್ ಕಮಲ ಕುರಿತಂತೆ ನಾನು ಬಿಡುಗಡೆ ಮಾಡಿದ್ದ ಆಡಿಯೊ ಕುರಿತು ತಮ್ಮ ಧ್ವನಿಯನ್ನು ಮಿಮಿಕ್ರಿ ಮಾಡಿದ್ದಾರೆ ಎಂದು ಯಡಿಯೂರಪ್ಪ ಆರೋಪಿಸಿದ್ದರು. ಆದರೆ, ಈಗ ಒಪ್ಪಿಕೊಂಡಿದ್ದಾರೆ. ಬಹುಶಃ ಮಂಜುನಾಥಸ್ವಾಮಿ ಅವರಿಗೆ ಬುದ್ಧಿ ಕೊಟ್ಟಿರಬಹುದು ಎಂದು ಕುಹಕವಾಡಿದರು.



### ಕೀಳು ಮಟ್ಟದ ರಾಜಕಾರಣ

**ಹುಬ್ಬಳ್ಳಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಕ್ಕೆ ಕೇಂದ್ರ ಸರಕಾರ ತಮಗೆ ಆಹ್ವಾನ ನೀಡಿಲ್ಲ. ಕೇಂದ್ರದ ಯೋಜನೆಗೆ ರಾಜ್ಯ ಸರಕಾರವೂ ಹಣ ನೀಡಿದೆ. ಆದರೆ, ರಾಜ್ಯದ ಮುಖ್ಯಮಂತ್ರಿಯನ್ನು ಆಹ್ವಾನಿಸದೆ ಕಾರ್ಯಕ್ರಮ ಮಾಡುವ ಮೂಲಕ ಕೀಳುಮಟ್ಟದ ರಾಜಕಾರಣವನ್ನು ಕೇಂದ್ರ ಸರಕಾರ ಮಾಡುತ್ತಿದೆ ಎಂದು ಸಿಎಂ ಕುಮಾರಸ್ವಾಮಿ ಕಿಡಿಕಾರಿದರು.**

**ಕುದುರೆ ವ್ಯಾಪಾರ ಮಾಡುವ ಜಯಮಾನ ನನ್ನದಲ್ಲ:** ಶಾಸಕರನ್ನು ಖರೀದಿ ಮಾಡುವಷ್ಟು ಹಣ ನಮ್ಮ ಬಳಿಯಿಲ್ಲ. ಕುದುರೆ ವ್ಯಾಪಾರ ಮಾಡುವ ಜಾಯಮಾನ ನನ್ನದಲ್ಲ. ನಮ್ಮದು ಪ್ರಾದೇಶಿಕ ಪಕ್ಷ. ಮುನ್ನಡೆಸುವುದೇ ಕಷ್ಟ.

ನಮ್ಮ ಪಕ್ಷಕ್ಕೆ ಬಂದು ನನ್ನನ್ನು ಉಳಿಸಿ ಎಂದು ನಾನು ಯಾವುದೇ ಬಿಜೆಪಿ ಶಾಸಕರನ್ನು ಕೇಳಿಕೊಂಡಿಲ್ಲ. ಯಾರಿಗೂ ಆಮಿಷ ಒಡ್ಡಿಲ್ಲ. ಶಾಸಕ ಸುಭಾಷ್ ಗುತ್ತೇದಾರ್ ಅವರಿಗೆ ಹಣ ನೀಡುತ್ತೇನೆ ಬನ್ನಿ ಎಂದು ಕರೆದಿಲ್ಲ ಎಂದು ಎಂದು ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಯಾರೋ ಕರೆದರು ಎಂದು ಹೋಗಿದ್ದೀರಿ. ನಮ್ಮ ಪಕ್ಷದಲ್ಲೇ ಇದ್ದಿದ್ದರೆ ಮಂತ್ರಿಯಾಗಬಹುದಿತ್ತು ಎಂದು ಹೇಳಿದ್ದೆ. ಆದರೆ, ಯಾರೊಬ್ಬರ ರಾಜಕೀಯ ಭವಿಷ್ಯ ಹಾಳು ಮಾಡುವ ವ್ಯಕ್ತಿ ನಾನಲ್ಲ. ಬಿಜೆಪಿಯವರ ಬಳಿ ಸಾಕಷ್ಟು ಹಣವಿರಬಹುದು. ಅವರು ಖರೀದಿ ಪ್ರಯತ್ನ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

### ಮೋದಿ ಟೀಕೆಗೆ ದೆಹಲಿಯಲ್ಲೇ ಉತ್ತರ ನೀಡುವೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತನ್ನ ರಾಜಕೀಯ ಜೀವನದಲ್ಲಿ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಏನೇನು ಕೊಡುಗೆ ನೀಡಿದ್ದೇನೆ ಎಂಬುವುದನ್ನು ದೆಹಲಿಗೆ ತೆರಳಿ ಪ್ರಧಾನಿ ಮೋದಿಯವರಿಗೆ ತಿಳಿಸಿಕೊಡುತ್ತೇನೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ಮೋದಿಯವರು ದೇವೇಗೌಡ ಸೋ ಕಾಲ್ಡ್ ಮಣ್ಣಿನ ಮಗ. ಅವರು ರೈತರಿಗಾಗಿ ಏನು ಮಾಡಿದ್ದಾರೆ? ಅವರ ಮಗ ಏನ್ ಮಾಡಿದ್ದಾರೆ ಎಂಬ ಬಗ್ಗೆ ಲಘುವಾಗಿ ಟೀಕೆ ಮಾಡಿದ್ದಾರೆ. ಈ ಟೀಕೆಗೆ ಸೂಕ್ತ ಉತ್ತರ ಕೊಡಲು ದೆಹಲಿಗೆ ತೆರಳುತ್ತಿರುವುದಾಗಿ ತಿಳಿಸಿದರು.

**ರಾಜ್ಯ ರಾಜಕೀಯದಲ್ಲಿ ಸಂಚಲನ ಉಂಟು ಮಾಡಿರುವ ಧ್ವನಿಸುರುಳಿ ಬಿಡುಗಡೆ ವಿಚಾರವಾಗಿ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಆಡಿಯೊ ಮಾಡಿರುವವರು ಯಾರು? ಅದು ತಮಗೆ ಸಂಬಂಧಿಸಿದ ವಿಚಾರವಲ್ಲ. ಹೀಗಾಗಿ ಪ್ರತಿಕ್ರಿಯೆ ನೀಡುವುದಿಲ್ಲ.**
**- ಎಚ್.ಡಿ.ದೇವೇಗೌಡ** ಮಾಜಿ ಪ್ರಧಾನಿ

ಕಳೆದ 58 ವರ್ಷಗಳಲ್ಲಿ ರಾಜ್ಯ ಮತ್ತು ರಾಷ್ಟ್ರಕ್ಕೆ ಯಾವ್ಯಾವ ಕೊಡುಗೆ ನೀಡಲಾಗಿದೆ ಎಂಬುದನ್ನು ದೆಹಲಿಯಲ್ಲಿ ಪ್ರಧಾನಿಗೆ ತಿಳಿಸುವೆ. ತಮ್ಮ ರಾಜಕೀಯ ಜೀವನದಲ್ಲಿ ರೈತರು, ನೀರಾವರಿಗಾಗಿ ಏನೇನು ಮಾಡಿದ್ದೇವೆ. ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿಗೆ ತಮ್ಮ ಕೊಡುಗೆ ಏನೆಂಬುದನ್ನು ಕೂಡ ಮನವರಿಕೆ ಮಾಡುತ್ತೇನೆ ಎಂದರು.

### ವಿಧಾನಸೌಧದ ಮುಂದೆ ದನಗಳ ಜಾತ್ರೆ

**ಚಿತ್ರದುರ್ಗ:** ರಾಜ್ಯದ ರಾಜಕಾರಣದ ಬಗ್ಗೆ ಜನ ರೋಸಿ ಹೋಗಿದ್ದಾರೆ. ಸಿಎಂ, ಮಾಜಿ ಸಿಎಂಗಳು ಆಡಿಯೊ, ವಿಡಿಯೊ ರಿಲೀಸ್ ಮಾಡಬಹುದು. ರಾಜಕಾರಣಿಗಳು ನಾಡಿನ ಮತದಾರ ಮನ್ನಿಸಲಾರದಂಥ ಕೆಲಸ ಮಾಡುತ್ತಿದ್ದೇವೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಎಚ್. ವಿಶ್ವನಾಥ್ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಕುಮಾರಸ್ವಾಮಿ, ಸಿದ್ದರಾಮಯ್ಯ, ಯಡಿಯೂರಪ್ಪ ಆಗಲಿ ಯಾವುದೇ ಮುಖಂಡರಿಗೆ ಭಗವಂತ ಒಳ್ಳೇ ಬುದ್ಧಿ ಕೊಡಲಿ. ಶಾಸಕರ ಖರೀದಿಸಲು ಒಬ್ಬರಿಗೆ 25-30 ಕೋಟಿ ರು. ಎಂದು ಮಾಧ್ಯಮಗಳಲ್ಲಿ ವರದಿ ಆಗುತ್ತಿದೆ. ಇದರಿಂದ ವಿಧಾನಸೌಧ ಬಳಿ ದನಗಳ ಜಾತ್ರೆ ನಡೆಯುತ್ತಿದೆಯೇ ಅನ್ನಿಸುತ್ತದೆ ಎಂದರು.

ನಾನು ದೇವರಾಜ ಅರಸು ಅವರ ಶಿಷ್ಯ, ನನ್ನ ಬೆಳವಣಿಗೆಗೆ ಅವರೇ ಕಾರಣ. ಯಾರೂ ಕೂಡ ದೇವರಾಜು ಅರಸು ಆಗಲು ಸಾಧ್ಯವಿಲ್ಲ, ಹತ್ತಿರಕ್ಕೂ ಹೋಗಲಾಗಲ್ಲ ಎಂದರು

## ಬಿಜೆಪಿ ಅವಿಶ್ವಾಸ ನಿರ್ಣಯ ಮಂಡಿಸಲಿ

**ತುಮಕೂರು:** ಸಮ್ಮಿಶ್ರ ಸರಕಾರಕ್ಕೆ ಸಂಖ್ಯಾ ಬಲವಿಲ್ಲ ಎಂದು ಹೇಳಿಕೆ ನೀಡುವುದನ್ನು ಬಿಟ್ಟು ಸದನದಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಲಿ. ವಿಶ್ವಾಸ ಮತಯಾಚನೆಗೆ ನಮ್ಮ ಮೈತ್ರಿ ಸರಕಾರ ಸಿದ್ಧವಿದೆ ಎಂದು ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಜಾಪ್ರಭುತ್ವಕ್ಕೆ ಧಕ್ಕೆಯಾಗುವಂತಹ ರೀತಿಯಲ್ಲಿ ವರ್ತಿಸುವುದನ್ನು ಮೊದಲು ಬಿಜೆಪಿ ನಿಲ್ಲಿಸಲಿ. ಸಂವಿಧಾನದಲ್ಲಿ ಅವಕಾಶವಿರುವುದರಿಂದಲೇ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರಕಾರ ರಚನೆ ಮಾಡಿದ್ದೇವೆ. ಇಲ್ಲಿ ಅಪವಿತ್ರತೆಯ ಪ್ರಶ್ನೆಯೇ ಇಲ್ಲ ಎಂದರು.



## ಪ್ರಧಾನಿ ಮೋದಿಗೆ ಬೆದರಿಕೆ ಪತ್ರ ಮಾಹಿತಿ ಕಲೆ ಹಾಕಿದ ಪೊಲೀಸರು

**ಹಾವೇರಿ:** ಪ್ರಧಾನಿ ನರೇಂದ್ರ ಮೋದಿ ಅವರು ಹುಬ್ಬಳ್ಳಿಗೆ ಭೇಟಿ ನೀಡಿದಾಗ ಹತ್ಯೆ ಮಾಡುವುದಾಗಿ ಹಾವೇರಿಯಿಂದ ರವಾನೆಯಾದ ಅನಾಮಧೇಯ ಬೆದರಿಕೆ ಪತ್ರವನ್ನು ಗಂಭೀರವಾಗಿ ಪರಿಗಣಿಸಿರುವ ಹುಬ್ಬಳ್ಳಿ ಪೊಲೀಸರು ಭಾನುವಾರ ನಗರಕ್ಕೆ ಆಗಮಿಸಿ ತನಿಖೆ ನಡೆಸಿ ಮಾಹಿತಿ ಕಲೆಹಾಕಿದ್ದಾರೆ. ಮೋದಿ ಅವರನ್ನು ಹತ್ಯೆ ಮಾಡುವುದಾಗಿ ಉಲ್ಲೇಖವಿರುವ ಪತ್ರ ಹಾವೇರಿ ಅಂಚೆ ಕಚೇರಿಯಿಂದ ರವಾನೆಯಾಗಿದೆ. ಮೋದಿ ಭೇಟಿ ಹಿನ್ನೆಲೆಯಲ್ಲಿ ಈ ಪತ್ರದ ಕುರಿತು ಭಾನುವಾರ ಬೆಳಗ್ಗೆ ಹುಬ್ಬಳ್ಳಿ ಪೊಲೀಸರು ಇಲ್ಲಿಗೆ ಆಗಮಿಸಿ ಪರಿಶೀಲಿಸಿ ಮಾಹಿತಿ ಸಂಗ್ರಹಿಸಿದ್ದಾರೆ. ಆದರೆ, ಇದು ಕಿಡಿಗೇಡಿಗಳ ಕೃತ್ಯವಾಗಿದ್ದು, ಗಂಭೀರ ಬೆದರಿಕೆ ಪತ್ರವಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಧಾನಿ ಮೋದಿಯವರ ಹತ್ಯೆ ಮಾಡುವುದಾಗಿ ಹಾವೇರಿಯಿಂದ ರವಾನೆಯಾದ ಬೆದರಿಕೆ ಪತ್ರವೊಂದು ಧಾರವಾಡ ಪೊಲೀಸರಿಗೆ ತಲುಪಿದ ಹಿನ್ನೆಲೆಯಲ್ಲಿ ಅಲ್ಲಿಯ ಪೊಲೀಸರು ಆಗಮಿಸಿ ಪರಿಶೀಲಿಸಿದ್ದಾರೆ ಎಂದು ಹಾವೇರಿ ಎಸ್ಪಿ ಕೆ.ಪರಶುರಾಮ ತಿಳಿಸಿದರು.

## ಹಳೇ ಪ್ರಕರಣಕ್ಕೆ ಮರು ಜೀವ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭೂಗತ ಪಾತಕಿ ರವಿ ಪೂಜಾರಿಗಾಗಿ ಬೆನ್ನು ಬಿದ್ದಿರುವ ನಗರ ಪೊಲೀಸರು, ರವಿ ಪೂಜಾರಿ ಮೇಲಿನ ಹಳೇ ಪ್ರಕರಣಗಳಿಗೆ ಮರು ಜೀವ ನೀಡಲು ಮುಂದಾಗಿದ್ದಾರೆ ಎಂದು ತಿಳಿದು ಬಂದಿದೆ.



2016ರಲ್ಲಿ ಸಚಿವ ಡಿ.ಕೆ.ಶಿವಕುಮಾರ್‌ಗೆ, ರವಿ ಪೂಜಾರಿ ಧಮ್ಕಿ ಹಾಕಿದ್ದ ಎನ್ನಲಾಗಿರುವ ಕೇಸ್‌ಗೂ ಮರುಜೀವ ನೀಡುವ ಚಿಂತನೆಯಲ್ಲಿದ್ದಾರೆ. ಧಮ್ಕಿ ಹಾಕಿದ್ದ ವೇಳೆ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಸದಾಶಿವನಗರ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣ ಸಂಬಂಧ ಎಫ್‌ಐಆರ್ ಸಹ ಆಗಿತ್ತು. ಆದರೆ ಆರೋಪಿ ತಲೆ ಮರೆಸಿಕೊಂಡಿದ್ದರಿಂದ ಸಿ ರಿಪೋರ್ಟ್ ಹಾಕಿ ಕೇಸ್ ಕ್ಲೋಸ್ ಮಾಡಲಾಗಿತ್ತು. ಸದ್ಯ ರವಿ ಪೂಜಾರಿ ಪಶ್ಚಿಮ ಆಫ್ರಿಕಾದ ಸೆನಗಲ್ ದೇಶದಲ್ಲಿ ಬಂಧನವಾಗಿದ್ದು, ಆತನನ್ನು ಬೆಂಗಳೂರಿಗೆ ಕರೆತರಲು ಪ್ರಯತ್ನ ನಡೆಯುತ್ತಿದೆ. ಜತೆಗೆ ರವಿ ಪೂಜಾರಿ ಮೇಲಿರುವ ಎಲ್ಲಾ ಕೇಸ್‌ಗಳನ್ನು ರೀ ಓಪನ್ ಮಾಡಲಾಗುತ್ತಿದೆ.

ರಾಜ್ಯದಲ್ಲಿ 60 ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿ ಪರಾರಿಯಾಗಿದ್ದ ಭೂಗತ ಪಾತಕಿ ರವಿ ಪೂಜಾರಿ ಪಶ್ಚಿಮ ಆಫ್ರಿಕಾದ ಸೆನಗಲ್ ದೇಶದಲ್ಲಿ ಬಂಧನವಾಗಿದ್ದ. ಸದ್ಯ ಆತನನ್ನು ಸೆನಗಲ್ ಪೊಲೀಸರಿಂದ ವಶಕ್ಕೆ ಪಡೆಯಲು ಕರ್ನಾಟಕ ಪೊಲೀಸರು ಪಣ ತೊಟ್ಟಿದ್ದಾರೆ. ಆದರೆ ರವಿ ಪೂಜಾರಿಯನ್ನ ಬಂಧಿಸಿದ್ದು, ಮಾತ್ರ ಕೇವಲ ಒಂದು ಫೋಟೋವನ್ನು ಆಧರಿಸಿ ಪತ್ತೆ ಹಚ್ಚಿ ಬಂಧಿಸಲಾಗಿದೆ.

ಬೆಂಗಳೂರಿನಿಂದ ಪರಾರಿಯಾಗಿದ್ದ ಪಾತಕಿ ರವಿ ಪೂಜಾರಿ ಪಶ್ಚಿಮ ಆಫ್ರಿಕಾದ ಸೆನಗಲ್ ದೇಶಕ್ಕೆ ಹೋಗಿ ತಲೆ ಮರೆಸಿಕೊಂಡಿದ್ದ. ಅಲ್ಲಿಯೂ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿಕೊಂಡಿದ್ದ. ಅಲ್ಲದೇ ಇತರೆ ಚಟುವಟಿಕೆಗಳಲ್ಲೂ ಭಾಗಿಯಾಗಿದ್ದ ಎಂದು ತಿಳಿದು ಬಂದಿದೆ. ಸೆನಗಲ್‌ನಲ್ಲಿ ಭಾರತೀಯ ಮೂಲದವರು ನಡೆಸುತ್ತಿದ್ದ ಕ್ರಿಕೆಟ್ ಪಂದ್ಯಾವಳಿ ಒಂದಕ್ಕೆ ರವಿ ಪೂಜಾರಿ ಅತಿಥಿಯಾಗಿ ಹೋಗಿದ್ದ ಎನ್ನಲಾಗಿದೆ.



'ರಥಸಪ್ತಮಿ ಯೋಗ ಉತ್ಸವ-2019' ನಿಮಿತ್ತ ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಯೋಗಾಸಕ್ತರು ಸೂರ್ಯ ನಮಸ್ಕಾರದಲ್ಲಿ ತೊಡಗಿದ್ದರು.

## ಮಂಡ್ಯದಿಂದಲೇ ಸ್ಪರ್ಧೆ: ಸುಮಲತಾ

ವಿಶ್ವವಾಣಿ ಸುದ್ದಿಮನೆ ಮಂಡ್ಯ

ತಮ್ಮ ರಾಜಕೀಯ ಪ್ರವೇಶದ ಬಗ್ಗೆ ಅಂಬರೀಶ್ ಅಭಿಮಾನಿಗಳು ತುಂಬ ಆಸೆ ಇಟ್ಟುಕೊಂಡಿದ್ದು, ಒತ್ತಾಸೆಯಾಗಿ ನಿಂತಿದ್ದಾರೆ. ಅವರ ಆಸೆ ಸೋಲಬಾರದೆನ್ನುವುದು ನನ್ನ ಆಸೆಯೂ ಆಗಿದೆ. ಸ್ಪರ್ಧೆ ಮಾಡುವುದೇ ಆದಲ್ಲಿ ಅದು ಮಂಡ್ಯದಿಂದಲೇ ಎಂದು ಸುಮಲತಾ ಅಂಬರೀಶ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ತಮ್ಮ ರಾಜಕೀಯ ಪ್ರವೇಶದ ನಿರ್ಧಾರವನ್ನು ಪರೋಕ್ಷವಾಗಿ ವ್ಯಕ್ತಪಡಿಸಿದ್ದು, ರಾಜಕೀಯಕ್ಕೆ ಬರುವ ಬಗ್ಗೆ ಈವರೆಗೆ ಯಾವುದೇ ರೀತಿಯ ಮಾತುಕತೆ ನಡೆಸಿಲ್ಲ. ರಾಜಕೀಯಕ್ಕೆ ಬರಲು ಜನರ ಒತ್ತಾಯ ಹೆಚ್ಚುತ್ತಿದೆ. ಈ ಕುರಿತು ಹಿರಿಯರ ಸಲಹೆ ಪಡೆದು, ನಿರ್ಧಾರ ಪ್ರಕಟಿಸುತ್ತೇನೆ ಎಂದು ಸುಮಲತಾ ಅಂಬರೀಶ್ ಹೇಳಿದರು.

ಈವರೆಗೆ ನನಗೆ ರಾಜಕೀಯ ಆಸಕ್ತಿ ಇರಲಿಲ್ಲ. ಆದರೆ, ರಾಜಕೀಯ ಪ್ರವೇಶದ ಬಗ್ಗೆ ಚರ್ಚಿಸುವ ಸಂದರ್ಭ ಬರುತ್ತೆ ಅಂತಲೂ ನಾನೂ ನಿರೀಕ್ಷಿಸಿರಲಿಲ್ಲ ಎಂದು ತಿಳಿಸಿದರು.

**ದುಡುಕಿನ ನಿರ್ಧಾರವಿಲ್ಲ:** ಅಂಬರೀಶ್ ಅವರ ಅಭಿಮಾನಿಗಳು ನಮ್ಮ ಜತೆ ಇದ್ದಾರೆ ಎನ್ನುವುದೇ ನನಗೆ ಸಂತೋಷದ ವಿಷಯ. ಯಾವ ಕಾರಣಕ್ಕೂ ದುಡುಕಿನ ನಿರ್ಧಾರ ತೆಗೆದುಕೊಳ್ಳಬಾರದೆನ್ನುವ ನಿಟ್ಟಿನಲ್ಲಿ ಕಾಲಾವಕಾಶ ಪಡೆದಿದ್ದೇನೆ ಎಂದು ಸುಮಲತಾ ಅಂಬರೀಶ್ ಹೇಳಿದರು.



ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಶ್ರೀಕ್ಷೇತ್ರದಲ್ಲಿರುವ ಶ್ರೀಕಾಲಭೈರವೇಶ್ವರ ದೇಗುಲದಲ್ಲಿ ಭಾನುವಾರ ವಿಶೇಷ ಪೂಜೆ ಸಲ್ಲಿಸಿದ ನಂತರ ನಟಿ ಸುಮಲತಾ ಅಂಬರೀಶ್ ಹಾಗೂ ಪುತ್ರ ಅಭಿಷೇಕ್‌ಗೌಡ.

### ಸಿಎಂಗೆ ಆಹ್ವಾನ ನೀಡದೇ ಮೋದಿ ಅಪಮಾನ: ದಿನೇಶ್ ಗುಂಡೂರಾವ್

# ಕಾಂಗ್ರೆಸ್‌ನಿಂದ ಮೋದಿಗೆ ಹಲವು ಪ್ರಶ್ನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಧಾರವಾಡದಲ್ಲಿ ಐಐಟಿಗೆ ಶಂಕುಸ್ಥಾಪನೆ ನೆರವೇರಿಸುವುದು ಸೇರಿದಂತೆ ವಿವಿಧ ಕಾರ್ಯಕ್ರಮಗಳ ಚಾಲನೆಗೆ ಪ್ರಧಾನಿ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳನ್ನು ಆಹ್ವಾನಿಸದಿರುವುದು ರಾಜ್ಯಕ್ಕೆ ಮಾಡಿದ ಅಪಮಾನ ಎಂದು ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್ ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಧಾರವಾಡದಲ್ಲಿ ಐಐಟಿ ಸ್ಥಾಪನೆಗೆ ಸಿದ್ದರಾಮಯ್ಯ ಸರಕಾರ ಇದ್ದಾಗ 500 ಎಕರೆ ಜಮೀನು ಉಚಿತವಾಗಿ ನೀಡಲಾಗಿತ್ತು. ಭಾನುವಾರ ಪ್ರಧಾನಿ ನರೇಂದ್ರ ಮೋದಿ ಆಗಮಿಸಿ ಉದ್ಘಾಟನೆ ಮಾಡುತ್ತಿದ್ದಾರೆ. ಆದರೆ, ಮುಖ್ಯಮಂತ್ರಿ ಕುಮಾರಸ್ವಾಮಿಯವರನ್ನು ಆಹ್ವಾನಿಸಿಲ್ಲ. ಸಿಎಂಗೆ ಆಹ್ವಾನ ನೀಡದೆ, ಕನಿಷ್ಠ ಸೌಜನ್ಯವನ್ನೂ ತೋರದೆ ರಾಜ್ಯಕ್ಕೆ ಅಗೌರವ ತೋರಿದ್ದಾರೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಮಾರಕವಾಗಿದೆ ಎಂದು ಕಿಡಿಕಾರಿದರು.

ಪ್ರಧಾನಿ ಮೋದಿ ಹುಬ್ಬಳ್ಳಿಗೆ ಬರುತ್ತಿದ್ದಾರೆ. ಅವರಿಗೆ ನಾವು ಕೆಲವು ಪ್ರಶ್ನೆ ಕೇಳುತ್ತಿದ್ದೇವೆ. ನಾ ಖಾವೂಂಗ ನಾ ಖಾನೇದೂಂಗ ಎನ್ನುತ್ತಾರೆ. ಆದರೆ, ರಾಜ್ಯದಲ್ಲಿ ಆಪರೇಷನ್ ಕಮಲ ಬಿರುಸಾಗಿದೆ. ಶಾಸಕರಿಗೆ ಹತ್ತು ಕೋಟಿ ರು. ಜತೆಗೆ ಚುನಾವಣೆ ಖರ್ಚು ಹಾಗೂ ಮಂತ್ರಿ ಸ್ಥಾನ ಕೊಡುವ ಆಮಿಷ ಒಡ್ಡಿದ್ದಾರೆ. ಟೇಪ್‌ನಲ್ಲಿರುವ ಧ್ವನಿ ಯಡಿಯೂರಪ್ಪನವರದ್ದೇ ಎಂದು ಸ್ಪಷ್ಟ. ಆಡಿಯೋ ಧ್ವನಿಯ ಪ್ರಕಾರವೇ ಲೆಕ್ಕ ಹಾಕಿದ್ರು, ಈಗ 200 ಕೋಟಿ ರು.ಬೇಕು. ಇಷ್ಟೊಂದು ಹಣ ರಾಜ್ಯ ಬಿಜೆಪಿ ನಾಯಕರಿಗೆ ಎಲ್ಲಿಂದ ಬರುತ್ತಿದೆ. ಕೇಂದ್ರದಿಂದ ಕಳುಹಿಸಿದ್ದೀರಾ, ಉದ್ಯಮಿಗಳಿಂದ ಕೊಡಿಸುತ್ತಿದ್ದೀರಾ ಸ್ಪಷ್ಟ ಪಡಿಸಬೇಕು ಎಂದು ಆಗ್ರಹಿಸಿದರು.





ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್ ಮಾತನಾಡಿದರು.

### ಕೃಷ್ಣ ಅವರ ಮುತ್ಸದ್ದಿತನ ಎಲ್ಲಿ ಹೋಯಿತು?

**ಅಧಿಕಾರದಲ್ಲಿದ್ದಾಗ ಒಂದು ಮಾತನಾಡುವುದು, ಅಧಿಕಾರದಲ್ಲಿ ಇಲ್ಲದಿದ್ದಾಗ ಇನ್ನೊಂದು ಮಾತನಾಡುವುದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ವಯಸ್ಸಿಗೆ ಶೋಭೆ ತರುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್ ಕಿಡಿಕಾರಿದರು. ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, ಅಧಿಕಾರ ಇದ್ದಾಗ ಎಲ್ಲವೂ ಸರಿ ಇತ್ತು. ಅಧಿಕಾರ ಕಳೆದುಕೊಂಡ ನಂತರ ಯಾವುದೂ ಸರಿ ಇಲ್ಲವೇ? ಈ ರೀತಿ ಮಾತನಾಡುವುದು ಹಿರಿಯ ನಾಯಕರಿಗೆ ಶೋಭೆ ತರುವುದಿಲ್ಲ. ಈ ರೀತಿ ಮಾತನಾಡಬಾರದು ಎಂದು ಎಸ್‌ಎಂಕೆ ವಿರುದ್ಧ ವಾಗ್ದಾಳಿ ನಡೆಸಿದರು. ಕೃಷ್ಣ ಅವರೊಬ್ಬ ಮುತ್ಸದ್ದಿ ನಾಯಕ ಎಂದು ತಿಳಿದಿದ್ದೆ. ಆ ಮುತ್ಸದ್ದಿತನ ಎಲ್ಲಿ ಹೋಯಿತು ಎಂಬುದನ್ನು ನಾವು ಪ್ರಶ್ನೆ ಮಾಡಬೇಕು. ಹೇಗೆ ಮಾತನಾಡಬೇಕು ಎಂದು ಅವರೇ ತಿಳಿದುಕೊಳ್ಳಬೇಕು ಎಂದು ಹರಿಹಾಯ್ದರು.**

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಮತ್ತು ನರೇಂದ್ರ ಮೋದಿಯವರು ಸುಪ್ರೀಂಕೋರ್ಟ್ ಜಡ್ಜ್‌ಗಳನ್ನು ನಿರ್ವಹಣೆ ಮಾಡುತ್ತಾರೆ ಎಂದು ನಿಮ್ಮ ಮುಖಂಡರೇ ನಮ್ಮ ಶಾಸಕರಿಗೆ ಹೇಳಿದ್ದಾರೆ. ಇದರ ಬಗ್ಗೆ ಪ್ರಧಾನ ಮಂತ್ರಿ ಏನು ಸ್ಪಷ್ಟನೆ ನೀಡುತ್ತಾರೆ? ಬರ ಪರಿಹಾರ ನೀಡುವ ವಿಷಯದಲ್ಲಿ ಕೇಂದ್ರ ಸರಕಾರದಿಂದ ಮಲತಾಯಿ ಧೋರಣೆ ಏಕೆ? ಮಹಾರಾಷ್ಟ್ರಕ್ಕೆ ಕೊಟ್ಟ ಪ್ರಮಾಣದಲ್ಲಿ ನಮ್ಮ ರಾಜ್ಯಕ್ಕೆ ಬರ ಪರಿಹಾರ ಅನುದಾನ ಏಕೆ ನೀಡಿಲ್ಲ? ಈ ಹಿಂದೆ ಮಹದಾಯಿ ವಿಷಯದಲ್ಲಿ ಮಾತುಕೊಟ್ಟು ಕೈಕೊಟ್ಟಿದ್ದಾರೆ. ಈ ಎಲ್ಲ ಪ್ರಶ್ನೆಗಳಿಗೆ ಪ್ರಧಾನಿ ಉತ್ತರ ನೀಡದೇ ಇದ್ದಲ್ಲಿ ಆಪರೇಷನ್ ಅಕ್ರಮಕ್ಕೆ ಅವರೇ ನೇರ ಸೂತ್ರಧಾರರು ಎಂಬುದು ಸಾಬೀತಾಗುತ್ತದೆ ಎಂದು ವಾಗ್ದಾಳಿ ನಡೆಸಿದರು.

**ಅತೃಪ್ತರ ಬಗ್ಗೆ ನೋವಿದೆ:** ಈಗಲೂ ನಮ್ಮ ಅತೃಪ್ತ ಶಾಸಕರ ಬಗ್ಗೆ ನೋವಿದ್ದು, ಬಿಜೆಪಿ ಷಡ್ಯಂತ್ರಕ್ಕೆ ಬಲಿಯಾಗಿ ತಮ್ಮ ಬದುಕು ಹಾಳು ಮಾಡಿಕೊಳ್ಳುತ್ತಿದ್ದಾರೆ. ಈಗಲೂ ಕಾಲ ಮಿಂಚಿಲ್ಲ. ಶಾಸಕರು ಯೋಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಅವರದೇ ಪಕ್ಷದ ಶಾಸಕರಿಗೆ ದಿನೇಶ್ ಗುಂಡೂರಾವ್ ಕಿವಿ ಮಾತು ಹೇಳಿದರು.

## ಬಿಎಸ್‌ವೈ ಆತ್ಮಸಾಕ್ಷಿಗೆ ಅಭಿನಂದನೆ

**ಬೆಂಗಳೂರು:** ಶಾಸಕರ ಪುತ್ರ ಶರಣಗೌಡರ ಜತೆಗೆ ಮಾತನಾಡಿರುವ ಕುರಿತು ಸಿಎಂ ಬಿಡುಗಡೆ ಮಾಡಿದ ಆಡಿಯೊ ತಮ್ಮದೇ ಎಂದು ಸ್ಪಷ್ಟಪಡಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಧನ್ಯವಾದ. ಅವರ ಆತ್ಮಸಾಕ್ಷಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಸಚಿವ ಡಿ.ಕೆ ಶಿವಕುಮಾರ್ ಎಂದು ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಆಪರೇಷನ್ ಕಮಲ ಸೇರಿದಂತೆ ಯಾವುದರ ಬಗ್ಗೆಯೂ ವಾಸ್ತವಾಂಶ ಏನೆಂಬುದನ್ನು ಹೆಚ್ಚುದಿನ ಮುಚ್ಚಿಡಲಾಗುವುದಿಲ್ಲ. ಒಬ್ಬ ಯಾವುದೇ ಸುಳ್ಳನ್ನು ಬಚ್ಚಿಡಲು ಸಾಧ್ಯವೇ ಇಲ್ಲ. ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರು ಬಿಡುಗಡೆ ಮಾಡಿದ್ದ ಧ್ವನಿ ಸುರುಳಿ ಕುರಿತು ಯಡಿಯೂರಪ್ಪ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಎಂದರು.

ಇನ್ನು ಸಿಎಂ ಬಿಡುಗಡೆ ಮಾಡಿದ ಆಪರೇಷನ್ ಆಡಿಯೊ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿಎಸ್ ಯಡಿಯೂರಪ್ಪ ಯೂಟರ್ನ್ ಹೊಡೆದಿದ್ದಾರೆ. ಮೊದಲಿಗೆ ನಾನಲ್ಲ ಎಂದಿದ್ದ ಅವರು ಈಗ ಕುತಂತ್ರ ಮಾಡಿಯೇ ನನ್ನ ಬಳಿ ಶಾಸಕ ನಾಗನಗೌಡ ಪುತ್ರ ಶರಣಗೌಡರನ್ನು ಕಳಿಸಿಕೊಟ್ಟಿದ್ದಾರೆ. ನಾನು ಅವರ ಜತೆ ಮಾತನಾಡಿದ್ದು ನಿಜ. ಆದರೆ ಕೆಲ ಸತ್ಯಗಳನ್ನು ಮರೆ ಮಾಚಿದ್ದಾರೆ. ಕುಮಾರಸ್ವಾಮಿ ಥರ್ಡ್ ಗ್ರೇಡ್ ಪಾಲಿಟಿಕ್ಸ್ ಮಾಡುತ್ತಿದ್ದಾರೆ ಎಂದು ಹೇಳುವ ಮೂಲಕ ಆಪರೇಷನ್ ಕಮಲದ ಸತ್ಯವನ್ನು ಒಪ್ಪಿಕೊಂಡಿದ್ದಾರೆ ಎಂದರು.

## ಕಾಂಗ್ರೆಸ್ ಮುಖಂಡನ ಮೇಲೆ ಹಲ್ಲೆ

**ಬೆಂಗಳೂರು:** ಲಕ್ಷ್ಮಣ್ ಮೂರ್ತಿಎಂಬಾತ ಚಾಕುವಿನಿಂದ ಇರಿದು, ಕಲ್ಲಿನಿಂದ ಹೊಡೆದು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡ ಶ್ರೀನಿವಾಸ್ ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಕೆ.ಆರ್.ಪುರ ಕ್ಷೇತ್ರದ ಎನ್‌ಆರ್‌ಐ ಬಡಾವಣೆಯಲ್ಲಿರುವ ತನ್ನ ಮನೆಯ ಮೊದಲ ಮಹಡಿ ನಿರ್ಮಾಣ ಮಾಡುವ ವೇಳೆ ದುರುದ್ದೇಶದಿಂದ ಕಟ್ಟಡ ನಿರ್ಮಾಣಕ್ಕೆ ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ತನ್ನ ಮೇಲೆ ಏಕಾಏಕಿ ಚಾಕುವಿನಿಂದ ಹಲ್ಲೆ ಮಾಡಿದ್ದಾರೆ ಎಂದು ಶ್ರೀನಿವಾಸ್ ಆರೋಪಿಸಿದ್ದಾರೆ. ಶ್ರೀನಿವಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ರಾಮಮೂರ್ತಿ ನಗರ ಪೊಲೀಸರಿಗೆ ದೂರು ನೀಡಿದ್ದಾರೆ. ಹಲ್ಲೆ ಮಾಡಿದ ಆರೋಪಿ ಲಕ್ಷ್ಮಣ್ ವಿರುದ್ಧ ಅಧಿಕಾರಿಗಳು ಕ್ರಮ ಜರುಗಿಸಬೇಕೆಂದು ಮನವಿ ಮಾಡಿದ್ದಾರೆ. ಅಲ್ಲದೇ ಎನ್‌ಆರ್‌ಐ ಕಾಲೋನಿಯ ಸುತ್ತಮುತ್ತಲಿನ ಎಲ್ಲಾ ಜನರ ಬಳಿ ಸುಮ್ಮನೆ ಕಿರಿಕಿರಿ ಮಾಡಿ ಬೆದರಿಕೆ ಹಾಕಿ ದುಡ್ಡು ಕೀಳುವುದು ಲಕ್ಷ್ಮಣ್ ಮೂರ್ತಿ ಕೆಲಸ ಎಂದು ಆರೋಪಿಸಿದ್ದಾರೆ.

# ಪೊಲೀಸ್ ಸಿಬ್ಬಂದಿ ಹಿತರಕ್ಷಣೆಗೆ ಔರಾದ್ಕರ್ ವರದಿ ಜಾರಿ ನಿಶ್ಚಿತ

ವಿಶ್ವವಾಣಿ ಸುದ್ದಿಮನೆ ವಿಜಯಪುರ

ಪೊಲೀಸ್ ಸಿಬ್ಬಂದಿ ಹಿತರಕ್ಷಣೆಗಾಗಿ ಔರಾದ್ಕರ್ ವರದಿ ಜಾರಿಗೆ ತರುವುದು ನಿಶ್ಚಿತ ಈ ಕುರಿತು ಪೊಲೀಸ್ ಸಿಬ್ಬಂದಿ ಆತಂಕಪಡುವ ಅಗತ್ಯವಿಲ್ಲ ಎಂದು ಗೃಹ ಸಚಿವ ಎಂ.ಬಿ.ಪಾಟೀಲ ಭರವಸೆ ನೀಡಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೇರೆ ಇಲಾಖೆಯ ಸಿಬ್ಬಂದಿ ವೇತನವನ್ನು ನೋಡಿದರೆ ನಮ್ಮ ಇಲಾಖೆ ಅದೇ ಸಮಾನಾಂತರ ಹುದ್ದೆಯಲ್ಲಿದ್ದವರಿಗೂ ಸಹ ತುಂಬ ಕಡಿಮೆ ವೇತನವಿದೆ. ಆ ಸಮಸ್ಯೆಯನ್ನು ಬಗೆಹರಿಸಿ ಸಮಾನಾಂತರ ತರುವುದೇ ಔರಾದ್ಕರ ವರದಿ ಉದ್ದೇಶವಾಗಿದೆ.

ಈಗಾಗಲೇ ಔರಾದ್ಕರ್ ವರದಿ ಜಾರಿಗಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ. ಅವುಗಳಲ್ಲಿ ಪ್ರಥಮಾದ್ಯತೆಯಾಗಿ ಉಳಿದ ಸರಕಾರಿ ನೌಕರರು ಹಾಗೂ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳ ನಡುವಿನ ವೇತನ ತಾರತಮ್ಯ (ಪೇ-ಸ್ಕೇಲ್) ಮೊದಲಾದವುಗಳ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಔರಾದ್ಕರ ವರದಿ ಜಾರಿಗೊಳಿಸಲು ನಾನು ಸಂಪೂರ್ಣ ಪ್ರಯತ್ನ ಮಾಡುತ್ತೇನೆ. ಅದನ್ನು ಜಾರಿಗೆ ತರಲು ನಾನು ಬದ್ಧನಾಗಿದ್ದೇನೆ. ಈ ವಿಷಯಕ್ಕಾಗಿ ಆರಕ್ಷಕರು ಹೆದರುವ ಅವಶ್ಯಕತೆ ಇಲ್ಲ ಎಂದರು.

ಬಹುತೇಕರಲ್ಲಿ ರಾಜಕೀಯ ಪ್ರಭಾವ ಹೊಂದಿರುವ ಪೊಲೀಸ್ ಅಧಿಕಾರಿಗಳಿಗೆ ಮಾತ್ರ ಎಕ್ಸಿಕ್ಯೂಟಿವ್ ಹುದ್ದೆ ಸಿಗುತ್ತದೆ ಎಂಬ ಭಾವನೆ ಮನೆ ಮಾಡಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಅಧಿಕಾರಿಯೂ ಎಕ್ಸಿಕ್ಯೂಟಿವ್, ನಾನ್ ಎಕ್ಸಿಕ್ಯೂಟಿವ್, ಪೊಲೀಸ್ ಟ್ರೈನಿಂಗ್ ಶಾಲೆಯಲ್ಲಿ ಕಡ್ಡಾಯವಾಗಿ ಸೇವೆ ಸಲ್ಲಿಸುವ ನಿಟ್ಟಿನಲ್ಲಿ ನಿಯಮಾವಳಿ ರೂಪಿಸಲಾಗುವುದು ಎಂದರು.

ಪೊಲೀಸ್ ಆಡಳಿತ ವ್ಯವಸ್ಥೆ ಸುಧಾರಣೆಗೆ ವಿಶೇಷ ಕ್ರಮ ಕೈಗೊಳ್ಳಲಾಗುತ್ತಿದ್ದು, ಡಿಜಿ ನೀಲಮಣಿ ರಾಜು ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚನೆ ಮಾಡಲಾಗಿದೆ. ಪೊಲೀಸ್ ಇಲಾಖೆಯಲ್ಲಿ ಹೊಸ ಸುಧಾರಣೆ ತರುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗುತ್ತಿದೆ ಎಂದರು.

ಅದರಂತೆ ಒಂದು ಸ್ಥಳಕ್ಕೆ ನಿಯೋಜಿತರಾಗುವ ಪೊಲೀಸ್ ಅಧಿಕಾರಿಗಳು ಕನಿಷ್ಠ 2 ವರ್ಷ ಅದೇ ಸ್ಥಳದಲ್ಲಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ನಿಯಮಾವಳಿ ರೂಪಿಸುವ ನಿಟ್ಟಿನಲ್ಲಿ ಚಿಂತನೆ ಮಾಡಲಾಗುತ್ತಿದ್ದು, ಶೀಘ್ರದಲ್ಲಿಯೇ ಸಾಧ್ಯಾಸಾಧ್ಯತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು.

ಈ ಹಿಂದೆಯೂ 2 ವರ್ಷ ಅವಧಿ ಇತ್ತು, ಆರ್. ಅಶೋಕ ಅವರು ಗೃಹ ಸಚಿವರಾಗಿದ್ದ ಸಂದರ್ಭದಲ್ಲಿ ಅವಧಿಯನ್ನು 1ವರ್ಷಕ್ಕೆ ಸೀಮಿತ ಮಾಡಲಾಗಿತ್ತು, ಆದರೆ 1 ವರ್ಷದಲ್ಲಿ ಆ ಅಧಿಕಾರಿ ತನ್ನ ಸರಹದ್ದಿನ ಬಗ್ಗೆ ತಿಳಿದುಕೊಳ್ಳಲು ತಿಂಗಳು ಬೇಕಾಗುತ್ತವೆ ಹೀಗಾಗಿ ಅದನ್ನು ಮಾರ್ಪಾಡು ಮಾಡಿ ಪುನಃ 2 ವರ್ಷಕ್ಕೆ ಏರಿಕೆ ಮಾಡುವ ನಿಟ್ಟಿನಲ್ಲಿ ಚರ್ಚಿಸಲಾಗುವುದು ಎಂದು ಪಾಟೀಲ ತಿಳಿಸಿದರು.

### ವಿಜಯಪುರ ಲೋಕಸಭೆಗೆ ಕಾಂಗ್ರೆಸ್ ಅಭ್ಯರ್ಥಿ

**ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು, ಮೈತ್ರಿ ಸರಕಾರದಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯೇ ಕಣಕ್ಕಿಳಿಯಲಿದ್ದಾರೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು. ಕಾಂಗ್ರೆಸ್ ಅಭ್ಯರ್ಥಿಯೇ ಲೋಕಸಭೆಗೆ ಸ್ಪರ್ಧಿಸಲಿದ್ದು, ಅದು ನಮ್ಮ ಜಿಲ್ಲೆಯವರೇ ಆಗಿರಲಿದ್ದಾರೆ. ಬೇರೆ ಜಿಲ್ಲೆಯವರಿಗೆ ನಾವು ಅವಕಾಶ ಕೊಡಲಾರೆವು ನಮ್ಮಲ್ಲಿಯೇ ಸಾಮರ್ಥ್ಯವುಳ್ಳವರು ಇರುವಾಗ ಬೇರೆಯವರನ್ನು ಕರೆತರುವ ಅವಶ್ಯಕತೆ ನಮಗಿಲ್ಲ. ಹಾಗೇನಾದರೂ ಒಂದು ವೇಳೆ ಪಕ್ಷವೇ ತೀರ್ಮಾನಿಸಿದರು ನಾವು ಪಕ್ಷಕ್ಕೆ ಮನವರಿಕೆ ಮಾಡಿಕೊಟ್ಟು ಜಿಲ್ಲೆಯ ಅಭ್ಯರ್ಥಿಗೆ ಅವಕಾಶ ಮಾಡಿಕೊಡಲಾಗುವುದು ಎಂದು ಹೇಳಿದರು.**